ಎಂ ವಿ ಸಿ ನಂಃ 425/2022

ಆರ್ ಡಬ್ಲ್ಯೂ-1

**(ಇಂದು ದಿನಾಂಕ 13-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಮುಖ್ಯವಿಚಾರಣೆಃ ಎದುರುದಾರರ ಪರ ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ .

ನಾನು ಈ ಅರ್ಜಿಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯ ಗುರುತಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು .

| **ಕ್ರ ಸಂ.** | **ದಾಖಲೆಗಳ ನಮೂನೆ** | **ನಿಶಾನೆ** |
|---|---|---|
| 1 | ಅಧಿಕಾರ ಪತ್ರ | ನಿಆರ್-1 |
| 2 | ವಿಮಾ ಪತ್ರದ ದೃಡಿಕೃತ ಪ್ರತಿ | ನಿಆರ್-2 |
| 3 | ಕ್ಲೈಂ ಡಿಟೇಲ್ಸ ಫಾರ್ಮ | ನಿಆರ್-3 |

**ಪಾಟೀಸವಾಲುಃ ಅರ್ಜಿದಾರರ ಪರ ವಕೀಲರಿಂದ**

1. ಅಪಘಾತವನ್ನು ನಾನು ಕಣ್ಣಾರೆ ನೊಡಿಲ್ಲ ಎಂದರೆ ಸರಿ. ಅಪಘಾತ ವಾದ ಸಮಯದಲ್ಲಿ ನಮ್ಮ ವಿಮೆ ಹೊಂದಿದ ವಾಹನ ವಿಮಾ ಷರತ್ತುಗಳನ್ನು ಉಲ್ಲಂಘನೆ ಮಾಡಿಲ್ಲ ಎಂದರೆ ಸರಿ.

ಎಂ ವಿ ಸಿ ನಂಃ 425/2022
ಆರ್ ಡಬ್ಲ್ಯೂ- 1

ದೋಷಾರೋಪಣ ಪಟ್ಟಿ ಯನ್ನು ಪ್ರಶ್ನೆ ಮಾಡಿಲ್ಲ ಕಾರಣ ನಾನು ಪಕ್ಷಗಾರ ಅಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರ ದಲ್ಲಿ ಬುಲೇರೊ ವಾಹನದ ತಪ್ಪಿನಿಂದ ಅಪಘಾತವಾಗಿದ್ದರಿಂದ ಸದರಿ ವಾಹನದ ವಿಮಾ ಕಂಪನಿಯವರು ಪರಿಹಾರ ನೀಡಬೇಕು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಸದರಿ ದೋಷಾರೋಪಣ ಪಟ್ಟಿ ಯಲ್ಲಿ ನಮ್ಮ ವಿಮೆ ಹೊಂದಿದ ಕಾರಿನ ನಿರ್ಲಕೆತನವನ್ನು ಹೊರತುಪಡಿಸಿ ಬೇರೆ ವಾಹನಗಳ ಮೇಲೆ ದೋಷಾರೋಪಣ ಪಟ್ಟಿ ಮಾಡಿಲ್ಲ ಎಂದರೆ ಸಾಕ್ಷಿ ಅದ್ನು ತಪ್ಪಾಗಿ ಹಾಕಿದ್ದಾರೆ ಎನ್ನುತ್ತಾರೆ. ಅದ್ದರಿಂದ ನಮ್ಮ ಅರ್ಜಿಯಲ್ಲಿ ಹೇಳಿದ ಹಾಗೇ ಉಳಿದ ವಾಹನದ ವಿಮೊ ಕಂಪೆನಿಯವರು ಈ ಪ್ರಕರಣಕ್ಕೆ ಅವಶ್ಯಕ ಪಕ್ಷಕಾರರು ಅಲ್ಲ ಎಂದರೆ ಸರಿಯಲ್ಲ. ಅಪಘಾತ 1 ನೇ ಎದುರುದಾರನ ಚಾಲಕನ ತಪ್ಪಿನಿಂದ ಆಗಿದ್ದರಿಂದ ಪರಿಹಾರ ನೀಡಲು ನಾವೇ ಬಾಧ್ಯಸ್ಥರು ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

**( ಆನಂದ ಎಸ್ ಕರಿಯಮ್ಮನವರ್)**
4 ನೇ ಹಿ ದಿ ನ್ಯಾಹಾಗೂ ಜೆಎಂಎಫ್‌ಸಿ,
ಧಾರವಾಡ.